## **ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ. ಸಂಖ್ಯೆ 121/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಜಾತ | ಪಿಡಬ್ಲ್ಯೂ ಃ 5 |
| ತಂದೆಯ / ಗಂಡನ ಹೆಸರು | : ವರದರಾಜು | ಸಿಡಬ್ಲ್ಯೂ ಃ 12 |
| ವಯಸ್ಸು | : 45 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಕಾವೇರಿ ನಗರ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 25.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಈ ಪ್ರಕರಣದ ಚಾ,ಸಾ. 1, 2 ಮತ್ತು 11 ಗೊತ್ತು. ಚಾ,ಸಾ. 13 ರಿಂದ 16 ರವರನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಹಿಂದೆ ನೋಡಿರುತ್ತೇನೆ. ಕಳೆದ 20 ವರ್ಷಗಳಿಂದ ನಾನು ಚಾ,ಸಾ. 2 ರವರ ಮನೆಯಲ್ಲಿ ಬಾಡಿಗೆಗೆ ಇದ್ದೇನೆ.

2. ಈಗ್ಗೆ 6 ವರ್ಷಗಳ ಹಿಂದೆ ಚಾ,ಸಾ. 2 ರವರಿಗೆ ಸೇರಿದ ಜಾಗದಲ್ಲಿ ಗಣಪತಿಯನ್ನು ಕೂರಿಸಿದ್ದರು. ಗಣಪತಿ ಬಿಡುವ ಸಂಧರ್ಬದಲ್ಲಿ ಸಣ್ಣ ಗಲಾಟೆ ನಡೆಯಿತು. ಆಗ ಚಾ,ಸಾ. 2 ರವರು ಯಾಕೆ ಗಲಾಟೆ ಮಾಡಿಕೊಳ್ಳುತ್ತೀರಿ, ಹೋಗಿ ಎಂದು ಗದರಿಸಿದರು. ನಂತರ ಪುನಃ ರಾತ್ರಿ 08.00 ರಿಂದ 08.15 ರ ಸಮಯಕ್ಕೆ ಚಾ,ಸಾ. 2

ರವರು ಮನೆಗೆ ಹೋಗುತ್ತಿದ್ದಾಗ 1 ನೇ ಆರೋಪಿ ಕತ್ತಿಯಲ್ಲಿ ಅವರ ಕುತ್ತಿಗೆಗೆ ಮತ್ತು ಎಡಕೈಗೆ ಹೊಡೆದ. ಆಗ ಅವರಿಗೆ ರಕ್ತ ಗಾಯಗಳಾದವು. ಚಾ,ಸಾ. 2 ರವರ ಎಡಗೈಯಲ್ಲಿದ್ದ ವಾಚ್ ಕೆಳಗೆ ಬಿತ್ತು. ಆ 1 ನೇ ಆರೋಪಿ ಇಂದು ನ್ಯಾಯಾಲಯದ ಮುಂದೆ ಇದ್ದಾನೆ. ಆತನನ್ನು ನೋಡಿ ಗುರುತಿಸುತ್ತೇನೆ. ಮಂಜ ಉ ಗುಂಡ ಎನ್ನುವವನು ಚಾಕುವಿನಿಂದ ಚಾ,ಸಾ. 2 ರವರ ಎಡ ಭಾಗದ ಬೆನ್ನಿನ ಹಿಂಭಾಗಕ್ಕೆ ಚುಚ್ಚಿದ . ಅಲ್ಲಿ ಅವರಿಗೆ ರಕ್ತ ಗಾಯವಾಯಿತು. ಉಳಿದವರು ಅವರಿಗೆ ಕೈಗಳಿಂದ ಹೊಡೆದರು. ಆ ಮಂಜುನಾಥ ಉ ಗುಂಡ ಇಂದು ನ್ಯಾಯಾಲಯದ ಮುಂದೆ ಇದ್ದಾನೆ. ಆತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಕೈಗಳಿಂದ ಹೊಡೆದ ಉಳಿದ ಆರೋಪಿತರು ಇಂದು ನ್ಯಾಯಾಲಯದ ಮುಂದೆ ಇದ್ದಾರೆ. ಅವರನ್ನು ನೋಡಿ ಗುರುತಿಸುತ್ತೇನೆ. ಆಗ ಬಹಳ ಜನರು ಬಂದರು. ಚಾ,ಸಾ. 11 ಅಲ್ಲಿಗೆ ಬಂದರು. ಜೆ ಎಸ್ ಎಸ್ ನಲ್ಲಿ ಡ್ರೈವರ್ ಕೆಲಸ ಮಾಡುವ ಒಬ್ಬ ಹುಡುಗ ಸಹ ಬಂದ. ಅಲ್ಲಿ ಜನರು ಸೇರಿದಾಗ ಈ ಆರೋಪಿತರೆಲ್ಲಾ ಆ ಸ್ಥಳದಿಂದ ಓಡಿದರು. ಅವರ ಕೈಗಳಲ್ಲಿದ್ದ ಮಚ್ಚು ಮತ್ತು ಚಾಕನ್ನು ಹಿಡಿದುಕೊಂಡೇ ಓಡಿದರು. ಆರೋಪಿತರು ಸ್ಥಳಕ್ಕೆ ಕಾರು ಮತ್ತು ಆಟೋದಲ್ಲಿ ಬಂದಿದ್ದರು. ಹೋಗುವಾಗ ಆಟೋವನ್ನು ಅಲ್ಲಿಯೇ ಬಿಟ್ಟು ಕಾರಿನಲ್ಲಿ ಹೋದರು. ನಂತರ ಅಲ್ಲಿ ಸೇರಿದ್ದವರು ಚಾ,ಸಾ. 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಲೈಟ್ ಬೆಳಕು ಇತ್ತು. ಚಾ,ಸಾ. 2 ರವರ ಮೇಲೆ ಹಲ್ಲೆ ಮಾಡಿದ್ದನ್ನು ನಾನು ಲೈಟ್ ಬೆಳಕಿನಲ್ಲಿ ನೋಡಿದೆ. ಆ ಗಲಾಟೆ ಆದ ಸ್ಥಳದಲ್ಲಿ ರಕ್ತ ನೆಲದ ಮೇಲೆ ಚೆಲ್ಲಿತ್ತು. ಆ ಮಚ್ಚು ಮತ್ತು ಚಾಕನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಎಂ ಒ 1 ಮತ್ತು 2 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದಿರುತ್ತಾರೆ.

3. ನಂತರ ನಾನು ಮೈಸೂರಿನ ಒಂದು ನ್ಯಾಯಾಲಯಕ್ಕೆ ಹೋಗಿ ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಅದು ಕಲಂ 164 ದ.ಪ್ರ.ಸಂ. ರಡಿಯಲ್ಲಿ ದಾಖಲಾದ ಹೇಳಿಕೆಯಾಗಿದ್ದು, ಸಾಕ್ಷಿ ಸದರಿ ಹೇಳಿಕೆಯನ್ನು ಗುರುತಿಸಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಹೇಳಿಕೆಯನ್ನು ಈಗ ನಿಪಿ 23 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 23(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.